## ಇವತ್ತೂ ಉಪ್ಪಿಟ್ಟಾ?

ಪ್ರತಿದಿನ ಮನೆಯಲ್ಲಿ ತಿಂಡಿಗೆ ಉಪ್ಪಿಟ್ಟೇ ಉಪ್ಪಿಟ್ಟು. ಒಂದು ದಿನ ಬೆಳಗ್ಗೆ, 'ಏನಮ್ಮ? ಇವತ್ತೂ ಉಪ್ಪಿಟ್ಟಾ?' ಎಂದು ಮುಖ ಗಂಟಿಕ್ಕಿಕೊಂಡು ಕೇಳಿದ ಸೋಮು. 'ಹೌದು ಕಣೊ, ನನಗೆ ಇಷ್ಟು ಮಾಡಿ ಹಾಕಕ್ಕೇ ಸಾಕಾಗಿ ಹೋಗ್ತಿದೆ... ನಿನ್ನ ತರಹೇವಾರಿ ಬೇಡಿಕೆಗಳನ್ನೆಲ್ಲ ನಾಳೆ ನಿನ್ನ ಹೆಂಡತಿ ಮುಂದೆ ಇಟ್ಕೊ... ನನ್ನ ಕಡೆಯಿಂದ ಆಗಲ್ಲ' ಎಂದು ರೇಗಿದಳು ತಾಯಿ ಸುಬ್ಬಮ್ಮ. ಸೋಮು ಸುಮ್ಮನೆ ಉಪ್ಪಿಟ್ಟು ತಿಂದು ಎದ್ದುಹೋದ.

ಮುಂದೆ ಮದುವೆಯಾದ ಮೇಲೂ ಮನೆಯಲ್ಲಿ ಅದೇ ತಿಂಡಿ. ಒಂದು ದಿನ ಉಪ್ಪಿಟ್ಟು ನೋಡಿ ಮುಖ ಗಂಟಿಕ್ಕಿದ ಸೋಮು, 'ಏನೇ, ಇವತ್ತೂ ಉಪ್ಪಿಟ್ಟಾ?' ಎಂದು ಹೆಂಡತಿಯನ್ನು ಕೇಳಿದ. 'ಹೌದು ರೀ, ಇಷ್ಟು ಮಾಡಿ ಹಾಕಕ್ಕೇ ಸಾಕಾಗಿ ಹೋಗ್ತಿದೆ ನನಗೆ... ನಿಮ್ಮ ತರಹೇವಾರಿ ತಿಂಡಿಯ ಬೇಡಿಕೆಗಳನ್ನೆಲ್ಲ ನಿಮ್ಮ ಅಮ್ಮನ ಮುಂದೆ ಇಟ್ಕೊಳ್ಳಿ... ನನ್ನಿಂದ ಅವೆಲ್ಲ ಆಗಲ್ಲ' ಎಂದು ರೇಗಿದಳು ಪತ್ನಿ. ಸೋಮು ಎಂದಿನಂತೆ ಸುಮ್ಮನೆ ಉಪ್ಪಿಟ್ಟು ತಿಂದು ಎದ್ದುಹೋದ.

**ಅನುಪಮಾ ವಸ್ತದ್**



ಕಲೆ: ಗಣೇಶ ಆಚಾರ್ಯ



## ಸಣ್ಣ ಆಪರೇಷನ್!

ಆಪರೇಷನ್ ಮಾಡಿಸಿಕೊಳ್ಳಲು ಗೌನ್ ಧರಿಸಿ ಸಿದ್ಧನಾಗಿದ್ದ ಗುಂಡ, ನರ್ಸ್‌ನ ಮಾತೊಂದು ಕಿವಿಗೆ ಬಿದ್ದು ಆಪರೇಷನ್ ಥಿಯೇಟರ್‌ನಿಂದ ಓಡಿ ಬಂದು ಹೊರಗಿದ್ದ ಹೆಂಡತಿಗೆ, 'ಬೇಗ ಇಲ್ಲಿಂದ ನಡಿ, ಮನೆಗೆ ಹೋಗೋಣ, ನಾನು ಆಪರೇಷನ್ ಮಾಡಿಸಿಕೊಳ್ಳುವುದಿಲ್ಲ' ಎಂದ. 'ಯಾಕ್ರಿ? ಏನಾಯ್ತು?' ಎಂದು ಗಾಬರಿಯಿಂದ ಕೇಳಿದಳು ಹೆಂಡತಿ. 'ನೀವೇನೂ ಹೆದರಬೇಡಿ, ಇದೊಂದು ಸಣ್ಣ ಆಪರೇಷನ್ ಅಷ್ಟೆ ಗಾಬರಿಗೊಳ್ಳುವಂತಹದ್ದು ಏನೂ ಇಲ್ಲ ಅಂತ ಅಲ್ಲಿ ನರ್ಸ್ ಹೇಳುತ್ತಿದ್ದಳು' ಎಂದು ಗುಂಡ ಓಡಿಬಂದುದಕ್ಕೆ ಕಾರಣ ಹೇಳಿದ. ಅದಕ್ಕೆ ಅವನ ಹೆಂಡತಿ, 'ಆಕೆ ನಿಮ್ಮನ್ನು ಸಮಾಧಾನ ಪಡಿಸಲು ಹಾಗೆ ಹೇಳಿದ್ದಿರಬೇಕು, ಅದರಲ್ಲೇನು ತಪ್ಪು?' ಎಂದು ಕೇಳಿದಳು. ಗುಂಡ ಹೇಳಿದ, 'ಆಕೆ ಹೇಳಿದ್ದು ನನಗಲ್ಲ ಕಣೆ, ಡಾಕ್ಟರ್‌ಗೆ!'

**ವಿದ್ಯಾ ವಿ. ಹಾಲಭಾವಿ**